ಪರಮಹಂಸ ರಸ್ತೆ ಯಾದಗಿರಿ ಕೊಳಚೆ ನಿವಾಸಿಗಳಿಗೆ ಗೋಕುಲಂ ನಲ್ಲಿ ನಿವೇಶನ ಮತ್ತು ಸೇವೆ ಯೋಜನೆಯಡಿಯಲ್ಲಿ 62 ನಿವೇಶನಗಳನ್ನು ರಚಿಸಿ ವಿತರಿಸಲಾಗಿದೆ. ವಾಕ್ ಶ್ರವಣ ಸಂಸ್ಥೆ ಮುಂಭಾಗದ ಕೊಳಚೆ ಪ್ರದೇಶದ ನಿವಾಸಿಗಳಿಗೆ ಬೋಗಾದಿ ಸರ್ವೆ ನಂ.280 ರಲ್ಲಿ 80 ಮನೆಗಳನ್ನು ವಾಂಬೆ ಯೋಜನೆಯಡಿ ಕೈಗೊಳ್ಳಲಾಗಿದ್ದು, ಕಾಮಗಾರಿ ಮುಕ್ತಾಯದ ಹಂತದಲ್ಲಿದೆ. ಈ ಕೆಳಕಂಡ 5 ಕೊಳಚೆ ಪ್ರದೇಶ ನಿವಾಸಿಗಳನ್ನು ಬೇರೆಡೆಗೆ ಸ್ಥಳಾಂರಿಸಲು ಜಮೀನನ್ನು ಮಂಜೂತರು ಮಾಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಎರಡು ವರ್ಷಗಳಿಂದಲೂ ಪತ್ರ ವ್ಯವಹಾರ ಮಾಡಲಾಗುತ್ತಿದೆ.

1. ಆರ್.ಎಂ.ಸಿ. ಯಾರ್ಡ್
2. ಮೈಸೂರು ಸಾ ಮಿಲ್ ಮುಂಭಾಗ
3. ಪಿ.ಕೆ. ಸ್ಯಾನಿಟೋರಿಯಂ ಹಿಂಭಾಗ
4. ಯಾದವಗಿರಿ (ಅರಸೀಕೆರೆ ರೈಲ್ವೆ ಲೈನ್ ಪಕ್ಕ)
5. ವಿ.ವಿ. ಮೊಹಲ್ಲಾ 16 ಕ್ರಾಸ್

ಕಾಫಿ ಬೋರ್ಡ್ ಹಿಂಭಾಗದ ಕೊಳಚೆ ಪ್ರದೇಶಕ್ಕೆ ಎ.ಬಿ.ಡಿ. ಯೋಜನೆಯಡಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದ್ದು ಆರ್.ಎಲ್.ಹೆಚ್.ಪಿ. ಮತಿಯಿಂದ ಕೆಲವು ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ.

ಇ) ಸದರಿ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸುಮಾರು 120.00 ಲಕ್ಷ ರೂ.ಗಳ ಅವಶ್ಯಕತೆ ಇರುವುದಾಗಿ ಅಂದಾಜು ಮಾಡಲಾಗಿದೆ. ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿಯಲ್ಲಿ 666 ಕುಟುಂಬಗಳಿಗೆ ವಸತಿ ಸೌಕರ್ಯ ಕಲ್ಪಿಸಲು ರೂ.40000.00 ಗಳಂತೆ 266.40 ಲಕ್ಷ ರೂ.ಗಳ ಅವಶ್ಯಕತೆ ಇರುತ್ತದೆಂದು ಅಂದಾಜು ಮಾಡಲಾಗಿದೆ.

ಈ) ಕೊಳಗೇರಿ ಪ್ರದೇಶದಲ್ಲಿನ ನಿವಾಸಿಗಳ ಸ್ಥಿತಿ-ಗತಿಗಳನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಸರ್ಕಾರವು 274.00 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಲಜ್ಯೋತಿ ಯೋಜನೆಯನ್ನು ಜಾರಿಗೊಳಿಸಲು ಕ್ರಮಕೈಗೊಂಡಿದೆ.

## ಆಲೂರು ಮತ್ತು ಸಕಲೇಶಪುರ ತಾಲ್ಲೂಕಿನಲ್ಲಿ ಹೊಸ ಸರ್ಕಾರಿ ಪ್ರೌಢ ಶಾಲೆಗಳ ಮಂಜೂರಾತಿ

1044 (1181) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲೂರು ಮತ್ತು ಸಕಲೇಶಪುರ ತಾಲ್ಲೂಕಿನಲ್ಲಿ ಹೊಸ ಸರ್ಕಾರಿ ಪ್ರೌಢ ಶಾಲೆಗಳ ಬೇಡಿಕೆ ಬಂದಿದೆಯೇ

ಆ) ಬಂದಿದ್ದರೆ ಯಾವಾಗ ಬಂದಿದೆ; ಅವು ಯಾವುವು; ಅವುಗಳಿಗೆ ಯಾವಾಗ ಮಂಜೂರಾತಿ ದೊರಕಿಸಲಾಗುವುದು

ಇ) ಚಾಲ್ತಿ ಸಾಲಿನಲ್ಲಿ ಹಾಸನ ಜಿಲ್ಲೆಗೆ ಎಷ್ಟು ಹೊಸಪ್ರೌಢ ಶಾಲೆ ಮಂಜೂರು ಮಾಡಲಾಗಿದೆ. ಅವು ಯಾವುವು. ತಾಲ್ಲೂಕುವಾರು ವಿವರ ನೀಡುವುದು.

ಪ್ರೊ.ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು) :

ಅ) ಹೌದು

ಆ) ಮೇ 2002 ತಿಂಗಳಲ್ಲಿ ಬಂದಿದೆ.

1) ಮಡಬಲು ಆಲೂರು ತಾಲ್ಲೂಕು
2) ಸುಳಗೋಡು ಕೂಡಗಿ ಸಕಲೇಶಪುರ
3) ಮಾರನ ಹಳ್ಳಿ ಸಕಲೇಶಪುರ ತಾಲ್ಲೂಕು
4) ಹಾಲೆ ಬೇಲೂರು ಸಕಲೇಶಪುರ ತಾಲ್ಲೂಕು
5) ಕಬ್ಬಿನಗದ್ದೆ ಸಕಲೇಶಪುರ ತಾಲ್ಲೂಕು

ಮೇಲ್ಕಂಡ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ.

ಇ) 2003-2004ನೇ ಸಾಲಿಗೆ ಹಾಸನ ಜಿಲ್ಲೆಗೆ ಒಟ್ಟು 4 ಪ್ರೌಢ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

1) ಹೆಬ್ಬಳಲು ನುಗ್ಗೆನಹಳ್ಳಿ ಹೋಬಳಿ ಚನ್ನರಾಯ ಪಟ್ಟಣ ತಾಲ್ಲೂಕು
2) ಗುಲಸಿಂಧ ಕಸಬಾ ಚನ್ನರಾಯಪಟ್ಟಣ ತಾಲ್ಲೂಕು
3) ಗುದ್ದೇನಹಳ್ಳಿ ಹೊಳೇನರಸಿಪುರ ತಾಲ್ಲೂಕು
4) ವಿಜಾಪುರ ಫಾರೆಸ್ಟ್ ಬಡಾವಣೆ ಅರಕಲಗೂಡು ತಾಲ್ಲೂಕು.

**ಕರ್ನಾಟಕ ರಾಜ್ಯದಲ್ಲಿ ಕಂಪ್ಯೂಟರ್ ಶಿಕ್ಷಣಕ್ಕೆ ಮಾನ್ಯತೆ**

1046 (1178) ಶ್ರೀ ಶಿವಪ್ಪ ಬಿ.ಬಿ. (ಸಕಲೇಶಪುರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ವಾಣಿಜ್ಯ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣಕ್ಕೆ ಮಾನ್ಯತೆ ನೀಡಿ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಪರೀಕ್ಷೆ ನಡೆಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ;

ಆ) ಇದ್ದಲ್ಲಿ, ಸದರಿ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ; ಚಾಲ್ತಿ ಚಾಲಿನಲ್ಲಿ ಅನುಮತಿ ನೀಡಲಾಗುವುದೆ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

**ಆಲೂರು ಪದವಿ ಪೂರ್ವಕಾಲೇಜಿಗೆ ಕೊಠಡಿಗಳ ಕೊರತೆ**

1047 (1179) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲೂರು ಪದವಿ ಪೂರ್ವ ಕಾಲೇಜಿಗೆ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗಿದೆ; ವಿವರ ನೀಡುವುದು?

ಪ್ರೊ.ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು) :

ಅ) ಬಂದಿದೆ